# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಆಯ್ದ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಫ್/255/ಹಗುಪ (1)/2014, ದಿನಾಂಕ: 24-01-2015 ಮತ್ತು 19-01-2016.

******

12 FEB 2016

**ಪ್ರಸ್ತಾವನೆ:**

ಮೇಲೆ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರಗಳಲ್ಲಿ, ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 5.65 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳು ಮತ್ತು ಕೆರೆಗಳು ಇರುವುದಲ್ಲದೆ, ಸುಮಾರು 5813 ಕಿ.ಮೀ. ಉದ್ದ ನದಿಗಳು ಮತ್ತು ತೊರೆಗಳು ಹೊಂದಿದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ (RKVY) ಉಪಯೋಜನೆಯಾದ ರಾಷ್ಟ್ರೀಯ ಪ್ರೋಟೀನ್ ಪೂರೈಕೆ ಅಭಿಯಾನದಡಿಯಲ್ಲಿ (NMPS) ಮಂಡ್ಯ ಜಿಲ್ಲೆ, ಕೆ.ಆರ್.ಸಾಗರದಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಅನ್ನು ಪ್ರಾಯೋಗಿಕವಾಗಿ ಕೈಗೊಂಡಿದ್ದು, ಯೋಜನೆಯು ಯಶಸ್ವಿ ಆಗಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು, ಇಲಾಖೆಯು ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಗೆ ಸಂಬಂಧಪಟ್ಟಂತೆ ರೂಪಿಸಿರುವ ಒಳನಾಡು ಮೀನುಗಾರಿಕೆ ಕಾರ್ಯನೀತಿ-2014 ರ ಆದೇಶ ದಿನಾಂಕ: 21-02-2014 ರಲ್ಲಿ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಪದ್ಧತಿಯನ್ನು ಅಳವಡಿಸಲು ಅವಕಾಶ ಕಲ್ಪಿಸಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ಜಲಾಶಯಗಳನ್ನು ಹಾಗೂ ಸ್ಥಳಗಳನ್ನು ಆಯ್ಕೆ ಮಾಡಲು ಹಾಗೂ ಮೇಲುಸ್ತುವಾರಿ ವಹಿಸಲು ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ "ಅಧಿಕಾರಯುಕ್ತ ಸಮಿತಿ" ಅನ್ನು ರಚಿಸಬೇಕಾಗಿದ್ದು, ಈ ಸಮಿತಿಯು "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಗುತ್ತಿಗೆ ಪಡೆಯಲು ಆಸಕ್ತಿ ತೋರುವ ಅರ್ಜಿದಾರರನ್ನು ಆಯ್ಕೆ ಮಾಡಲು ಹಾಗೂ ತದನಂತರ ಈ ಯೋಜನೆಯ ಅನುಷ್ಠಾನದಲ್ಲಿ ತಲೆದೋರಬಹುದಾದ ಸಮಸ್ಯೆಗಳನ್ನು ಬಗೆಹರಿಸಲು, ನಿರ್ಧಾರ ತೆಗೆದುಕೊಳ್ಳುವ ಅಧಿಕಾರಯುಕ್ತ ಸಮಿತಿ ಆಗಿರುತ್ತದೆ. ಆದ್ದರಿಂದ, ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಅನುಮೋದನೆ ನೀಡಿ, ಸದರಿ ಯೋಜನೆ ಅನುಷ್ಠಾನಕ್ಕಾಗಿ ಸಾರ್ವಜನಿಕರಿಂದ ಆಸಕ್ತಿ ವ್ಯಕ್ತಪಡಿಸಲು ಅರ್ಜಿಗಳನ್ನು ಆಹ್ವಾನಿಸಲು ಅನುಮೋದನೆ ನೀಡಲು ಹಾಗೂ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಗುತ್ತಿಗೆಗೆ ನೀಡಲು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳನ್ನು ಅನುಮೋದಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 10 ಮೀಇಇ 2015, ಬೆಂಗಳೂರು ದಿನಾಂಕ: 06-02-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕೆಳಕಂಡ ಸಮಿತಿ ರಚಿಸಲು ಹಾಗೂ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಸಾರ್ವಜನಿಕರಿಂದ ಆಸಕ್ತಿ ವ್ಯಕ್ತಪಡಿಸಲು ಅರ್ಜಿಗಳನ್ನು ಆಹ್ವಾನಿಸಲು ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಸಂಬಂಧ ಪ್ರಸ್ತಾಪಿಸಲಾದ ನಮೂನೆಗೂ ಸಹ ಈ ಮೂಲಕ ಅನುಮತಿಸಿದೆ.

**ಜಲಾಶಯಗಳಲ್ಲಿ "ತೇಲುವ ಪಂಜರಗಳ ಮೀನು ಕೃಷಿ" ಯೋಜನೆಯ ಅನುಷ್ಠಾನಕ್ಕಾಗಿ ರಚಿಸಿರುವ ಅಧಿಕಾರಯುಕ್ತ ಸಮಿತಿ**

| ಕ್ರಮ ಸಂಖ್ಯೆ | ಸಮಿತಿ ಸದಸ್ಯರುಗಳು | |
|---|---|---|
| 1) | ಮೀನುಗಾರಿಕೆ ನಿರ್ದೇಶಕರು | – ಅಧ್ಯಕ್ಷರು |
| 2) | ಮೀನುಗಾರಿಕೆ ಜಂಟಿ ನಿರ್ದೇಶಕರು (ಒಳನಾಡು) | – ಸದಸ್ಯ ಕಾರ್ಯದರ್ಶಿ |
| 3) | ಮುಖ್ಯಸ್ಥರು, ಕೇಂದ್ರೀಯ ಒಳನಾಡು ಮೀನುಗಾರಿಕಾ ಸಂಶೋಧನಾ ಕೇಂದ್ರ, ಬೆಂಗಳೂರು ಅಥವಾ ಅವರ ಪ್ರತಿನಿಧಿ ವಿಜ್ಞಾನಿ, (ಸಿ.ಐ.ಎಫ್.ಆರ್.ಐ.) | – ಸದಸ್ಯರು |
| 4) | ಸಂಬಂಧಪಟ್ಟ ಜಲಾಶಯದ ಮೀನುಗಾರಿಕೆ ಉಪ ನಿರ್ದೇಶಕರು ಅಧಿಕಾರಿ | – ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/2/16

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

**ಆದೇಶ ಸಂಖ್ಯೆ: ಪಸಂಮೀ 10 ಮೀಇಇ 2015 ಬೆಂಗಳೂರು ದಿನಾಂಕ: 06-02-2016 ರ**

## ಅನುಬಂಧ

## "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಜಲಾಶಯಗಳನ್ನು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1. ರಾಜ್ಯದಲ್ಲಿರುವ ಆಯ್ದ ಮಧ್ಯಮ ಅಥವಾ ದೊಡ್ಡ ಜಲಾಶಯಗಳಲ್ಲಿ "ತೇಲುವ ಪಂಜರದಲ್ಲಿ ಮೀನು ಕೃಷಿ" ಕೈಗೊಳ್ಳಲು ಮೀನುಗಾರಿಕೆ ಇಲಾಖೆಯಿಂದ ಗರಿಷ್ಟ 10 ವರ್ಷಗಳಿಗೆ ಗುತ್ತಿಗೆ ನೀಡತಕ್ಕದ್ದು.
2. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಮೇಲುಸ್ತುವಾರಿ ಮಾಡಲು "ಅಧಿಕಾರಿಯುಕ್ತ ಸಮಿತಿ'' ಯನ್ನು ರಚಿಸಲಾಗಿದೆ. ಈ ಸಮಿತಿಯು ಸಮರ್ಥ ಉದ್ಯಮಿ/ವ್ಯಕ್ತಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಗುತ್ತಿಗೆ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಪಾರದರ್ಶಕ ನಿಯಮಾನುಸಾರ ಪರಿಗಣಿಸಿ ಆಯ್ಕೆ ಮಾಡಲು ಹಾಗೂ ಸ್ಥಳವನ್ನು ಹಂಚಿಕೆ ಮಾಡಲು ಅಧಿಕಾರಯುಕ್ತ ಸಮಿತಿಯಾಗಿರುತ್ತದೆ.
3. ಆಯ್ದ ಜಲಾಶಯಗಳ ಜಲವಿಸ್ತೀರ್ಣದ ಗರಿಷ್ಠ ಶೇ.10ರ ಭಾಗದಲ್ಲಿ "ಪಂಜರದಲ್ಲಿ ಮೀನು ಕೃಷಿ'' ಕೈಗೊಳ್ಳಲು ಗುತ್ತಿಗೆ ನೀಡತಕ್ಕದ್ದು. ಪ್ರತಿ ಘಟಕದ ಜಲವಿಸ್ತೀರ್ಣವನ್ನು 0.25 ಹೆಕ್ಟೇರ್‌ಗೆ ಸೀಮಿತಗೊಳಿಸಿದೆ. ಒಬ್ಬ ಯಶಸ್ವಿ ಅರ್ಜಿದಾರರಿಗೆ ಒಂದು ಜಲಾಶಯದಲ್ಲಿ ಗರಿಷ್ಠ 4(ನಾಲ್ಕು) ಘಟಕಗಳನ್ನು ಮಾತ್ರ ಗುತ್ತಿಗೆ ನೀಡತಕ್ಕದ್ದು.
4. ಪ್ರತಿ ಘಟಕಕ್ಕೆ ಕನಿಷ್ಠ ರೂ.10,000/-ಗಳ ವಾರ್ಷಿಕ ಗುತ್ತಿಗೆ ಮೊತ್ತ ನಿಗಧಿಪಡಿಸಿದೆ. ಉಳಿದ 9 ವರ್ಷಗಳಿಗೆ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡಾ 5%ರಷ್ಟು ಗುತ್ತಿಗೆ ಮೊತ್ತ ಹೆಚ್ಚಿಸತಕ್ಕದ್ದು.
5. ಭದ್ರತಾ ಠೇವಣಿಯಾಗಿ ರೂ.2.00 ಲಕ್ಷಗಳು ಪ್ರತಿ ಘಟಕಕ್ಕೆ ನಿಗದಿಪಡಿಸಿದ್ದು, ಈ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರವರ ಹೆಸರಿನಲ್ಲಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಮೂಲಕ ಪಾವತಿಸತಕ್ಕದ್ದು. ಗುತ್ತಿಗೆ ಅವಧಿ ಮುಗಿದನಂತರ ಯಾವುದಾದರೂ ಬಾಕಿ ಇದ್ದಲ್ಲಿ ಕಟಾಯಿಸಿಕೊಂಡು ಉಳಿದ ಈ ಠೇವಣಿ ಹಣವನ್ನು ಬಡ್ಡಿರಹಿತವಾಗಿ ಹಿಂತಿರುಗಿಸತಕ್ಕದ್ದು.
6. ಜಲಾಶಯಗಳಲ್ಲಿ ಅಥವಾ ಮೀನು ಕೊಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮೀನು ಸಾಕಾಣಿಕೆ ಮಾಡಿರುವ ಬಗ್ಗೆ ಅರ್ಜಿದಾರ ಉದ್ದಿಮೆದಾರರು/ವ್ಯಕ್ತಿ/ಸಂಸ್ಥೆ/ಸಂಸ್ಥೆಯ ಪ್ರಾಯೋಜಕರಿಗೆ ಕನಿಷ್ಠ 5 ವರ್ಷಗಳ ಅನುಭವಿರಬೇಕು.
7. ಅರ್ಜಿದಾರರು ಪ್ರತಿ ಘಟಕವನ್ನು ಗುತ್ತಿಗೆ ಮೇರೆಗೆ ಪಡೆಯಲು ಪ್ರತಿ ಘಟಕವನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಕನಿಷ್ಠ ರೂ.50.00 ಲಕ್ಷ ಬಂಡವಾಳ ಹೂಡಲು ಆರ್ಥಿಕ ಸಾಮರ್ಥ್ಯವನ್ನು ಹೊಂದಿರಬೇಕು. ಈ ಬಗ್ಗೆ ಅರ್ಜಿದಾರರು ಬ್ಯಾಂಕಿನಿಂದ ರೂ.50.00ಲಕ್ಷ ಮೀರಿದ "ಸಾಲ್‌ವೆನ್ಸಿ ಪ್ರಮಾಣ ಪತ್ರ"ವನ್ನು ಸಲ್ಲಿಸುವಂತರಾಗಿರಬೇಕು.

8. ಸರ್ಕಾರ ನಿಗದಿಪಡಿಸಿದ ಮೊದಲನೇ ವರ್ಷದ ಗುತ್ತಿಗೆ ಮೊತ್ತ ಹಾಗೂ ಠೇವಣಿ ಮೊತ್ತವನ್ನು ಆಯ್ಕೆಯಾದ ಅರ್ಜಿದಾರರು ಕರಾರು ಪತ್ರದೊಡನೆ ಸಲ್ಲಿಸುವುದು ಉಳಿದ ವರ್ಷಗಳ ಗುತ್ತಿಗೆಯನ್ನು ಮುಂದಿನ ವರ್ಷ ಪ್ರಾರಂಭವಾಗುವ ಮುಂಚೆ ಸರ್ಕಾರಕ್ಕೆ ಪಾವತಿಸಿ ಗುತ್ತಿಗೆ ನವೀಕರಣವನ್ನು ಪಡೆದುಕೊಳ್ಳುವುದು.

9. ತೇಲುವ ಪಂಜರದ ಘಟಕದಿಂದ ಸಾರ್ವಜನಿಕ ಹಿತದೃಷ್ಠಿಗೆ ಧಕ್ಕೆಯಾದಲ್ಲಿ ಗುತ್ತಿಗೆ ರದ್ದುಪಡಿಸುವ ಅಧಿಕಾರವನ್ನು ಅಧಿಕಾರಯುಕ್ತ ಸಮಿತಿ ಹೊಂದಿರುತ್ತದೆ.

10. ಗುತ್ತಿಗೆ ನೀಡಿದ ತೇಲುವ ಪಂಜರದ ಘಟಕವನ್ನು ಮೀನು ಕೃಷಿಗಾಗಿ ಮಾತ್ರ ಬಳಸತಕ್ಕದ್ದು. ಬೇರೆ ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಅಂದರೆ ಪ್ರವಾಸೋದ್ಯಮ ಅಥವಾ ಕ್ರೀಡಾ ಮೀನುಗಾರಿಕೆಗೆ ಇತ್ಯಾದಿ ಉದ್ದೇಶಕ್ಕಾಗಿ ಬಳಸಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸತಕ್ಕದ್ದು.

11. ಇಲಾಖೆಯು ಅನುಮತಿಸಿದ ತಳಿಯ ಮೀನುಗಳನ್ನು ಮಾತ್ರ ತೇಲುವ ಪಂಜರಗಳಲ್ಲಿ ಬೆಳಸತಕ್ಕದ್ದು.

12. ತೇಲುವ ಪಂಜರದಲ್ಲಿ ಮೀನು ಕೃಷ್ಠಿ ಕೈಗೊಳ್ಳವಾಗ ಪಂಜರಗಳಿಗೆ ಅಥವಾ ಪಂಜರದಲ್ಲಿರುವ ಮೀನುಗಳಿಗೆ ಪ್ರಾಕೃತಿಕ ವಿಕೋಪಗಳಿಂದಾಗಲೀ ಅಥವಾ ಇನ್ನಿತರ ಕಾರಣದಿಂದ ಯಾವುದೇ ಹಾನಿ / ನಷ್ಟ ಸಂಬಂಧಿಸಿದಲ್ಲಿ ಇಲಾಖೆಯಿಂದ ಯಾವುದೇ ಪರಿಹಾರ ನೀಡಲಾಗುವುದಿಲ್ಲ. ಆಗುವ ನಷ್ಟಕ್ಕೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

13. ಗುತ್ತಿಗೆ ಪಡೆದು ಸ್ಥಾಪಿಸುವ ತೇಲುವ ಪಂಜರದ ಗುತ್ತಿಗೆಯನ್ನು ಯಾರಿಗೂ ಉಪ ಗುತ್ತಿಗೆಗೆ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

14. ತೇಲುವ ಪಂಜರವನ್ನು ಸ್ಥಾಪಿಸಲು ಬೇಕಾದ ಪೂರ್ಣ ಬಂಡವಾಳವನ್ನು ಸ್ವಂತ ಹಣದಿಂದ ಅಥವಾ ಬ್ಯಾಂಕಿನ ಅಥವಾ ಇತರೇ ಸಾಲದಿಂದ ಗುತ್ತಿಗೆದಾರರೇ ಭರಿಸುವುದು. ಆದರೆ, ಸರ್ಕಾರವು ನೀಡುವ ಸಹಾಯಧನ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.

15. ಘಟಕವನ್ನು ಗುತ್ತಿಗೆ ಪಡೆದ ಒಂದು ವರ್ಷದೊಳಗೆ ಪಂಜರಗಳನ್ನು ನಿರ್ಮಿಸಿ ಮೀನು ಕೃಷಿಯನ್ನು ಕೈಗೊಳ್ಳತಕ್ಕದ್ದು, ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವುದು.

16. ಗುತ್ತಿಗೆ ಅವಧಿ ಮುಗಿದನಂತರ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಅಧಿಕಾರಯುಕ್ತ ಸಮಿತಿ ಹೊಂದಿರುತ್ತದೆ.

17. ಪ್ರತಿ ಬೆಳೆಯ ಮೀನುಮರಿ ಬಿತ್ತನೆ, ಮೀನು ಹಿಡುವಳಿ, ಮಾರಾಟ ಮತ್ತು ಆದಾಯದ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಗುತ್ತಿಗದಾರರು ಸಂಬಂಧಪಟ್ಟ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-1/2)ರವರಿಗೆ ಸಲ್ಲಿಸುವುದು.

18. ಈ ಯೋಜನೆಯ ಅನುಷ್ಠಾನದ ಬಗ್ಗೆ ಸಮಸ್ಯೆಗಳಿದ್ದಲ್ಲಿ ಅಧಿಕಾರಯುಕ್ತ ಸಮಿತಿಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳತಕ್ಕದ್ದು. ಒಂದು ಪಕ್ಷ ಭಿನ್ನಾಭಿಪ್ರಾಯ ಬಗೆಹರಿಯದಿದ್ದಲ್ಲಿ ಸರ್ಕಾರ ಈ ವಿಷಯದಲ್ಲಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಗುತ್ತಿಗೆದಾರರು ಬದ್ದರಾಗತಕ್ಕದ್ದು.

-3-

19. ಸರ್ಕಾರವು ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತು ಮತ್ತು ನಿಬಂಧನೆಗಳಿಗೆ ಬದ್ದರಾಗಿರತಕ್ಕದ್ದು. ಗುತ್ತಿಗೆದಾರರು ಗುತ್ತಿಗೆ ಅವಧಿಯ ವರ್ಷದ ಮಧ್ಯದಲ್ಲಿ ಗುತ್ತಿಗೆಯನ್ನು ನಿರಾಕರಿಸಿದ್ದಲ್ಲಿ ಗುತ್ತಿಗೆ ಮೊತ್ತ ಮತ್ತು ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

20. ಇಲಾಖಾ ಅಧಿಕಾರಿಗಳು ಅಪೇಕ್ಷಿಸಿದಾಗ ಘಟಕವನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

21. ಮೇಲಿನ ಯಾವುದೇ ಷರತ್ತುಗಳನ್ನು ಗುತ್ತಿಗೆದಾರರು ಉಲ್ಲಂಘಿಸಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು (ಅಧಿಕಾರಯುಕ್ತ ಸಮಿತಿಯು) ಕಾಯ್ದಿರಿಸಿಕೊಂಡಿರುತ್ತದೆ.

22. ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸುವುದಾಗಿ ಗುತ್ತಿಗೆದಾರರು ರೂ.200/- ರ ಮೌಲ್ಯದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಬರೆದು ಕೊಡುವುದು.

6/2/16

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

6/2/16

## ಕರ್ನಾಟಕ ಸರ್ಕಾರ

## ಮೀನುಗಾರಿಕೆ ಇಲಾಖೆ

**ರಾಜ್ಯದ ಆಯ್ದ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಅರ್ಜಿ**

ಅರ್ಜಿ ಸಂಖ್ಯೆ: ................

ಬೆಲೆ ರೂ.2000/-

| ಕ್ರ. ಸಂ. | ವಿವರ | |
|---|---|---|
| 1 | ವ್ಯಕ್ತಿ/ಸಂಸ್ಥೆಯ ಹೆಸರು | |
| 2 | ಪೂರ್ಣ ವಿಳಾಸ | |
| 3 | ದೂರವಾಣಿ ಸಂಖ್ಯೆ:<br>ಕಛೇರಿ:<br>ಮನೆ:<br>ಮೊಬೈಲ್:<br>ಇ-ಮೇಲ್ ವಿಳಾಸ: | |
| 4 | ವ್ಯಕ್ತಿ/ಸಂಸ್ಥೆಯ/ಪ್ರಾಯೋಜಕರ ವಿದ್ಯಾರ್ಹತೆ | |
| 5 | ಮೀನುಗಾರಿಕೆ ಕ್ಷೇತ್ರದಲ್ಲಿ ಸಾಧಿಸಿರುವ ಗಣನೀಯ ಸಾಧನೆಯ (ಏನಾದರೂ ಇದ್ದಲ್ಲಿ) ವಿವರಗಳು | |
| 6 | ಜಲಾಶಯಗಳಲ್ಲಿ ಮತ್ತು ಮೀನು ಕೊಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮೀನು ಸಾಕಾಣಿಕೆ ಮಾಡಿರುವ ಬಗ್ಗೆ ವ್ಯಕಿ/ಸಂಘ/ಸಂಸ್ಥೆಯು ಪ್ರಾಯೋಜಕರಿಗೆ ಇರುವ ಅನುಭವ (ಕನಿಷ್ಠ 5 ವರ್ಷ)(ದಾಖಲಾತಿ ಸಲ್ಲಿಸುವುದು) | |
| 7 | ಕರ್ನಾಟಕದಲ್ಲಿ ಮೀನುಮರಿ ಉತ್ಪಾದನಾ ಕೇಂದ್ರದ ಒಡೆತನ ಅಥವಾ ಗುತ್ತಿಗೆ ಹೊಂದಿರುವ ಬಗ್ಗೆ ದಾಖಲಾತಿಗಳು. | |

| | | |
|---|---|---|
| 8 | ತೇಲುವ ಪಂಜರಗಳನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಬಂಡವಾಳ ಹೂಡಲು ಆರ್ಥಿಕ ಸಾಮರ್ಥ್ಯ ಹೊಂದಿರುವ ಬಗ್ಗೆ ಬ್ಯಾಂಕಿನ ಸಾಲ್ವೆನ್ಸಿ ಪ್ರಮಾಣ ಪತ್ರ ಪ್ರತಿ ಘಟಕಕ್ಕೆ ಕನಿಷ್ಠ 50.00 ಲಕ್ಷಗಳು (ಲಗತ್ತಿಸುವುದು) | |
| 9 | ಮೀನುಗಾರಿಕೆ/ ಮೀನುಗಾರಿಕೆ ಉದ್ದಿಮೆಯಲ್ಲಿ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಅಥವಾ ಅದರ ಪ್ರಾಯೋಜಕರು ಮಾಡಿರುವ ವ್ಯಾಪಾರ ವಹಿವಾಟಿನ ಬಗ್ಗೆ ಮಾಹಿತಿ (ದಾಖಲಾತಿ ಸಲ್ಲಿಸುವುದು) | |
| 10 | ಗುತ್ತಿಗೆ ಮೊತ್ತ ಮತ್ತು ಠೇವಣಿ ಮೊತ್ತದ ಮೊಬಲಗಿಗೆ ನಗದು ಹುಂಡಿ ಲಗತ್ತಿಸಲಾಗಿದೆಯೇ? ಹಾಗಿದ್ದಲ್ಲಿ ಹುಂಡಿಗಳ ಸಂಖ್ಯೆ, ದಿನಾಂಕ ಮತ್ತು ಬ್ಯಾಂಕ್ ಹೆಸರು | |

ಮೇಲ್ಕಂಡ ಎಲ್ಲಾ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ. ಯಾವುದೇ ಮಾಹಿತಿ ತಪ್ಪಾಗಿದ್ದಲ್ಲಿ ಈ ಬಗ್ಗೆ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ದನಾಗಿರುತ್ತೇನೆ. ಅರ್ಜಿಯ ಜೊತೆಯಲ್ಲಿ ಅನುಬಂಧಿಸಲಾಗಿರುವ ನಿಯಮ ಮತ್ತು ಷರತ್ತುಗಳಿಗೆ ನಾನು ಒಪ್ಪಿರುತ್ತೇನೆ. ಹಾಗೂ ಗುತ್ತಿಗೆದಾರರನಾಗಿ ಆಯ್ಕೆಗೊಂಡಲ್ಲಿ ಈ ಎಲ್ಲಾ ಷರತ್ತುಗಳಿಗೂ ಬದ್ದನಾಗಿರುತ್ತೇನೆಂದು ಕರಾರು ಪತ್ರ ನೀಡಲು ಒಪ್ಪಿರುತ್ತೇನೆ.

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ/-